ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು ದಿಃ 25-11-2019.

ಮುಂದುವರಿದ ಪಾಟೀ ಸವಾಲುಃ 3 ನೇ ಪ್ರತಿವಾದಿ ಪರವಾಗಿ ಶ್ರೀ ಜಿ.ವಿ.ಎಸ್. ವಕೀಲರಿಂದಃ

ಅಸಲು ದಾವೆ ನಂ.3773/2004 ರಲ್ಲಿ ನನ್ನ ವಿಚಾರಣೆ ಆಗಿದೆ. ಸದರಿ ಪ್ರಕರಣದಲ್ಲಿ ನಾನು ಡಿಡಬ್ಲ್ಯೂ-1 ಆಗಿ ಸಾಕ್ಷಿ ಹೇಳಿದ್ದೇನೆ. ಸಾಕ್ಷಿಗೆ ಅಸಲು ದಾವೆ ನಂ.3773/2004 21 ಪುಟಗಳಿರುವ ಸಾಕ್ಷ್ಯದ ಧೃಡೀಕೃತ ನಕಲನ್ನು ತೋರಿಸಿದಾಗ ಅದನ್ನು ನೋಡಿ ಒಪ್ಪಿಕೊಳ್ಳುತ್ತಾರೆ. ಆದಕಾರಣ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ನಾನು ಅರವಿಂದ್ ಕಾಮತ್ ರವರನ್ನು ಪ್ರತಿವಾದಿ ಸಾಕ್ಷಿ-2 ಎಂದು, ಸರ್ವಮಂಗಳ ಎ. ಕಾಮತ್ ರವರನ್ನು ಪ್ರತಿವಾದಿ ಸಾಕ್ಷಿ-3 ಆಗಿ ಮತ್ತು ಲಕ್ಷ್ಮೀಶ ಕಡಮಣಯ್ಯುರವರನ್ನು ಸಾಕ್ಷಿ-4 ಎಂದು ವಿಚಾರಣೆಗೊಳಪಡಿಸಿದ್ದೇನೆ. ಸದರಿ ಇಬ್ಬರ ಸಾಕ್ಷ್ಯದ ಧೃಡೀಕೃತ ನಕಲುಗಳನ್ನು ಸಾಕ್ಷಿಗೆ ತೋರಿಸಿದಾಗ ಸಾಕ್ಷಿಯು ಅವುಗಳನ್ನು ಒಪ್ಪಿಕೊಳ್ಳುತ್ತಾರೆ. ಆದಕಾರಣ 11 ಪುಟಗಳಿರುವ ಅರವಿಂದ್ ಕಾಮತ್ ರವರ ಸಾಕ್ಷ್ಯದ ಧೃಡೀಕೃತ ನಕಲನ್ನು ನಿಡಿ-2, 10 ಪುಟಗಳಿರುವ ಸರ್ವಮಂಗಳ ಎ. ಕಾಮತ್ ರವರ ಸಾಕ್ಷ್ಯದ ಧೃಡೀಕೃತ ನಕಲನ್ನು ನಿಡಿ-3 ಮತ್ತು 5 ಪುಟಗಳಿರುವ ಲಕ್ಷ್ಮೀಶ ಕಡಮಣಯ್ಯುರವರ ಸಾಕ್ಷ್ಯದ ಧೃಡೀಕೃತ ನಕಲನ್ನು ನಿಡಿ-4 ಎಂದು ಗುರುತಿಸಲಾಯಿತು. ನಾನು ಹೇಳಿದಂತೆ 2 ಮತ್ತು 3 ನೇ ವಾದಿಯರನ್ನು ನಾನು ದತ್ತು ಪಡೆದುಕೊಳ್ಳಲಿಲ್ಲವಾದರೂ ಸಹ ದತ್ತು ಪಡೆದುಕೊಂಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಮತ್ತು ಸಾಕ್ಷಿದಾರರನ್ನೂ ಸಹ ಸುಳ್ಳು ಸಾಕ್ಷಿ ಹೇಳುವ ಹಾಗೆ ಮಾಡಿದ್ದೇನೆ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC0A0025192009/truecopy/order-4.pdf

(2 ನೇ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು).

ಓ. ಹೇ. ಕೇ. ಸರಿ ಇದೆ,

74 ನೇ ಅ.ನ.ಸಿ. ನ್ಯಾಯಾಧೀಶರು (ಸಿಸಿಎಚ್-74),
ಮೇಯೋಹಾಲ್ ವಿಭಾಗ, ಬೆಂಗಳೂರು.

This is a True Copy of the Court Records Online. Authenticated @ districts.ecourtsindia.com/cnr/KABC0A0025192009/truecopy/order-4.pdf

www.ecourtsindia.com